<u>ಸಿವಿಲ್ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ,</u>
<u>ಹಗರಿಬೊಮ್ಮನಹಳ್ಳಿ</u>

ಸಿ ಸಿ ನಂ. 690/2022

<u>ಸಾಕ್ಷಿಗೆ ದಿನಾಂಕ 18-12-2025 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

C.W.: 2 P.W.: 3

| | | |
|---|---|---|
| ಹೆಸರು | ಃ | ಶೇಖರನಾಯ್ಕ |
| ತಂದೆಯ ಹೆಸರು | ಃ | ಮೇಗ್ಯಾನಾಯ್ಕ |
| ವಯಸ್ಸು | ಃ | 38 ವರ್ಷ |
| ಉದ್ಯೋಗ | ಃ | ಕಿರಾಣಿ ಅಂಗಡಿ |
| ವಾಸ ಸ್ಥಳ | ಃ | ಕೋಗಳಿ ತಾಂಡ |

<u>ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ-</u>

ಈಗ್ಗೆ 2 ವರ್ಷದ ಹಿಂದೆ ನಾನು ನಮ್ಮ ಊರಿನಲ್ಲಿದ್ದಾಗ ಪೋಲೀಸರು ಬಂದರು. ನಾನು ಮತ್ತು ಚಾಸಾ-5 ರವರು ನಮ್ಮ ಊರಿನ ಬಸ್ ನಿಲ್ದಾಣದಲ್ಲಿದ್ದಾಗ ಪೋಲೀಸರು ನಮ್ಮ ಬಳಿ ಬಂದು ಒಂದು ದಾಖಲೆಗೆ ಸಹಿ ಪಡೆದಿರುತ್ತಾರೆ. ಅಲ್ಲಿ ಏನಾಗಿತ್ತು ಎಂದು ನನಗೆ ಗೊತ್ತಿಲ್ಲ. ಪೋಲೀಸರು ಮಹಜರಿಗೆ ಸಹಿ ಮಾಡಿ ಅಂತಾ ಸದರಿ ದಾಖಲೆಗೆ ಸಹಿ ಪಡೆದಿರುತ್ತಾರೆ. ಸಾಕ್ಷಿಯು ನಿಪಿ-1 ಪಂಚನಾಮೆಯಲ್ಲಿ ತನ್ನ ಸಹಿ ಇದೆ ಅಂತಾ ನೋಡಿ ಗುರುತಿಸಿದ್ದು ಅದನ್ನು ನಿಪಿ-1ಬಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ-2 ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿ ತನ್ನ ಸಹಿ ಇದೆ ಅಂತಾ ನೋಡಿ ಗುರುತಿಸಿದ್ದು ಅದನ್ನು ನಿಪಿ-2ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ-3 ಫೋಟೋವನ್ನು ನೋಡಿ ಗುರುತಿಸಿರುತ್ತಾರೆ. ಪಂಚನಾಮೆ ಮತ್ತು ನಕಾಶೆಯಲ್ಲಿ ಪೋಲೀಸರು ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ, ಯಾವ ಕಾರಣಕ್ಕಾಗಿ ನಿಪಿ-3 ಫೋಟೋ ತೆಗೆದಿರುತ್ತಾರೆಂದು ನನಗೆ ಗೊತ್ತಿಲ್ಲ. ಆರೋಪಿತರು ನಮ್ಮ ಊರಿನವರು ಇರುತ್ತಾರೆ. ಪೋಲೀಸರ ಕೋರಿಕೆ ಮೇರೆಗೆ ನಾನು ಸದರಿ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

(ಸಹಾಯಕ ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ನೀಡಲು ಕೇಳಿಕೊಂಡಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸ. ಸ. ಅಭಿಯೋಜಕರವರಿಂದಃ-</u>

ದಿಃ28-07-2022 ರಂದು ಬೆಳಿಗ್ಗೆ 8 ರಿಂದ 10 ಗಂಟೆ ಸಮಯದಲ್ಲಿ ಪೋಲೀಸರು ಆರೋಪಿತರನ್ನು ಕೋಗಳಿ ತಾಂಡದ ಸಾರ್ವಜನಿಕ ಗ್ರಂಥಾಲಯದ ಬಳಿ ಕರೆದುಕೊಂಡು ಬಂದು

ಅವರು ತೋರಿಸಿದಂತಹ ಸ್ಥಳದಲ್ಲಿ ನಿಪಿ-1 ರಂತೆ ನನ್ನ ಮತ್ತು ಚಾಸಾ-3 ರವರ ಸಮಕ್ಷಮ ಪಂಚನಾಮೆಯನ್ನು ಜರುಗಿಸಿದ್ದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತರು ಮಧ್ಯಸೇವನೆಗಾಗಿ ಹಣ ಕೂಡಿಸಲು ದಿಃ26-07-2022 ರಂದು 12 ಗಂಟೆಗೆ ಕೋಗಳಿ ತಾಂಡದ ಸಾರ್ವಜನಿಕ ಗ್ರಂಥಾಲಯದ ಬಾಗಿಲು ಮುರಿದು ಗ್ರಂಥಾಲಯದ ಒಳಗೆ ಇದ್ದ 15 ಕಬ್ಬಿಣದ ಚೇರುಗಳು ಹಾಗೂ ಒಂದು ಗೋಡೆ ಗಡಿಯಾರವನ್ನು ಕಳ್ಳತನ ಮಾಡಿರುತ್ತೇವಂತಾ ಪೋಲೀಸರಿಗೆ ನಮ್ಮ ಸಮ್ಮುಖದಲ್ಲಿ ತಿಳಿಸಿದರೆಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ನಾನವು ಪ್ರಾಥಮಿಕ ಶಾಲೆ ಕಾಂಪೌಂಡ್ ಹತ್ತಿರ ಬಚ್ಚಿಟ್ಟಿದ್ದು ನೀವು ಬಂದಲ್ಲಿ ಅವುಗಳನ್ನು ತೋರಿಸುತ್ತೇವಂತಾ ಪೋಲೀಸರಿಗೆ ತಿಳಿಸಿದರೆಂದರೆ ಸರಿಯಲ್ಲ. ಆಗ ನಾವು ಮತ್ತು ಚಾಸಾ-3, 6 ಹಾಗೂ ಆರೋಪಿತರು ಸೇರಿ ಪೋಲೀಸರ ಜೊತೆ ಅವರ ವಾಹನದಲ್ಲಿ ಕೋಗಳಿ ತಾಂಡದ ವಾಟರ್ ಫಿಲ್ಟರ್ ಹತ್ತಿರ ಹೋಗಿರುತ್ತೇವೆ ಆಗ ಆರೋಪಿತರು ಚೇರುಗಳು ಮತ್ತು ಗಡಿಯಾರವನ್ನು ತೋರಿಸಿದರೆಂದರೆ ಸರಿಯಲ್ಲ. ಅವುಗಳನ್ನು ಪೋಲೀಸರು ನಿಪಿ-1 ರಂತೆ ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡರು ಮತ್ತು ನಿಪಿ-3 ರಂತೆ ಫೋಟೋ ತೆಗೆದರೆಂದರೆ ಸರಿಯಲ್ಲ. ಆರೋಪಿತರು ನಮ್ಮನ್ನು ಮತ್ತು ಪೋಲೀಸರನ್ನು ಸಾರ್ವಜನಿಕ ಗ್ರಂಥಾಲಯಕ್ಕೆ ಕರೆದುಕೊಂಡು ಹೋಗಿ ನಾವು ಸದರಿ ಗ್ರಂಥಾಲಯದಲ್ಲಿ ಮು ಮಾಲುಗಳನ್ನು ಕಳುವು ಮಾಡಿರುತ್ತೇವಂತಾ ತೋರಿಸಿದರೆಂದರೆ ಸರಿಯಲ್ಲ. ಸದರಿ ಪಂಚನಾಮೆಯಲ್ಲಿ ಸಂಪೂರ್ಣ ವಿವರಗಳನ್ನು ಪೋಲೀಸರು ಬರೆದಿದ್ದು ಅದನ್ನು ನಾನು ತಿಳಿದುಕೊಂಡು ಸದರಿ ಪಂಚನಾಮೆಗೆ ಸಹಿ ಮಾಡಿರುತ್ತೇನೆಂದರೆ ಸರಿಯಲ್ಲ. ಆ ಪಂಚನಾಮೆಯನ್ನು ಪೋಲೀಸರು ಬೆಳಿಗ್ಗೆ 8 ರಿಂದ 10 ಗಂಟೆವರೆಗೆ ಮಾಡಿರುತ್ತಾರೆಂದರೆ ಸರಿಯಲ್ಲ. ಸ್ಥಳದಲಿಲ ನಿಪಿ-2 ರಂತೆ ನಕಾಶೆ ತಯಾರಿಸಿದರೆಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿತರು ನಮ್ಮ ಗ್ರಾಮದವರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನ್ಯಾಯಾಲಯದ ಮು ಮಾ-1 ಮತ್ತು 2 ನ್ನು ಆರೋಪಿತರಿಂದಲೇ ವಶಪಡಿಸಿಕೊಂಡಿರುತ್ತಾರೆಂದರೆ ಸರಿಯಲ್ಲ.

ಪಾಟೀ ಸವಾಲು. ಆರೋಪಿ ಪರ ವಕೀಲರಿಂದಃ- ಇಲ್ಲ

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ